ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆಗೆ ಕ್ರೈಂ ಸಬ್‌ಇನ್ಸ್‌ಪೆಕ್ಟರ್ ನೇಮಕ

216 (333) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ):–ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಭದ್ರಾವತಿ ಕ್ಷೇತ್ರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕ್ರೈಂ ಸಬ್‌ಇನ್ಸ್‌ಪೆಕ್ಟರ್ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸಬ್‌ಇನ್ಸ್‌ಪೆಕ್ಟರ್ ರವರನ್ನು ಯಾವಾಗ ನೇಮಕ ಮಾಡಲಾಗುವುದು?

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು):–

ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆಗೆ ಒಂದು ಸಬ್–ಇನ್ಸ್‌ಪೆಕ್ಟರ್ ಹುದ್ದೆಯು ಮಾತ್ರ ಸರ್ಕಾರದಿಂದ ಮಂಜೂರಾಗಿರುತ್ತದೆ. ಈ ಠಾಣೆಗೆ ಸಬ್–ಇನ್ಸ್‌ಪೆಕ್ಟರ್ ಕ್ರೈಂ ಹುದ್ದೆಯು ಮಂಜೂರಾಗದೇ ಇರುವುದರಿಂದ ನೇಮಕ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಹೆಚ್.ಡಿ./207/ಪಿಒಪಿ/2008, ದಿನಾಂಕ 10–02–2010ರ ಪ್ರಕಾರ ಭದ್ರಾವತಿ ನಗರದ ಹೊಸಮನೆ ಶಿವಾಜಿ ಸರ್ಕಲ್ ಪ್ರದೇಶದಲ್ಲಿ ನೂತನವಾಗಿ ಒಂದು ಪೊಲೀಸ್ ಠಾಣೆಯನ್ನು ತೆರೆಯಲಾಗಿದ್ದು, ಈ ಪೊಲೀಸ್ ಠಾಣೆಗೆ ಒಂದು ಪಿ.ಎಸ್.ಐ. ಹುದ್ದೆಯನ್ನು ಮಂಜೂರು ಮಾಡಲಾಗಿರುತ್ತದೆ. ಈ ಮೊದಲು ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಗೆ ಒಳಪಟ್ಟಿದ್ದ ಸುಮಾರು 22 ಹಳ್ಳಿಗಳನ್ನು ನೂತನ ಹೊಸಮನೆ ಶಿವಾಜಿ ಸರ್ಕಲ್ ಪೊಲೀಸ್ ಠಾಣೆ ವ್ಯಾಪ್ತಿಗೆ ವರ್ಗಾಯಿಸಲಾಗಿರುತ್ತದೆ. ಇದರಿಂದಾಗಿ ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಿರುತ್ತದೆ. ಅಪರಾಧ ಪಿಎಸ್‌ಐ ಹುದ್ದೆ ಸೃಜಿಸಲು ಅಪರಾಧ ಸಂಖ್ಯೆಯನ್ನು ಅವಲಂಬಿಸಿದ್ದು, (ಕನಿಷ್ಟ 300 ಅಪರಾಧಗಳು) ಕಳೆದ 3 ವರ್ಷಗಳಲ್ಲಿ ಸ್ವತ್ತಿನ ಅಪರಾಧಗಳು 300ಕ್ಕೂ ಕಡಿಮೆ ಇರುವುದರಿಂದ ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆ ಪಿ.ಎಸ್.ಐ. (ಅಪರಾಧ) ಹುದ್ದೆಯ ಅವಶ್ಯಕತೆ ಇರುವುದಿಲ್ಲವೆಂದು ಕಂಡುಬರುತ್ತದೆ.

ಭದ್ರಾವತಿಯಲ್ಲಿ ಪೊಲೀಸ್ ಪೇದೆಗಳ ಕೊರತೆ

217 (334) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ):–ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–